"That the Karnataka Certain Inams Abolition (Amendment) Bill 1984 as amended be passed."

The Motion was adopted and the Bill was amended

(iii) The Karnataka Village Offices Abolition (Amendment) Bill, 1984

Motion to Consider

Sri V. L. Patil (Minister for Revenue).—Sir, I beg to move :

"That the Karnataka Village Offices Abolition (Amendment Bill, 1984, be taken into consideration."

The question was proposed

ಶ್ರೀ ವಿ. ಎಲ್. ಪಾಟೀಲ್.—ಕೊಳ್ಳೇಗಾಲ ತಾಲ್ಲೂಕ್ ಬಳ್ಳಾರಿ. ಮದ್ರಾಸ್ ಹೀಗೆ ಐದು ತರದಲ್ಲಿ ರಲಿಜಿಯಸ್, ಚಾರಿಟಬಲ್, ಸರ್ವೀಸ್, ಪರ್ಸನಲ್—ಇವೇ ಮುಂತಾದವುಗಳ ಮುಖಾಂತರ ಇದ್ದಂಥ ಪ್ರಾಪರ್ಟಿಯನ್ನು ಅನರವರು ಅನುಭವಿಸಿಕೊಂಡು ಬರುತ್ತಿದ್ದರು. ಅವರು ಮಾಡಬೇಕಾದರೆ ಡಿ.ಸಿ. ಯಿಂದ ಪರ್ಮಿಷನ್ ತೆಗೆದುಕೊಂಡು ಮಾಡಬೇಕಾಗಿತ್ತು ಮತ್ತು ಡಿ.ಸಿ. ಯವರು ಪರ್ಮಿಷನ್ ಕೊಡುತ್ತಿದ್ದರು. ಅದಕ್ಕೆ 15 ವರ್ಷಗಳಕಾಲ ರಿಸ್ಟ್ರಿಕ್ಷನ್ ಇತ್ತು. ಅದನ್ನು ಕಡಿಮೆ ಮಾಡಬೇಕೆಂದು ಈ ಒಂದು ಮಸೂದೆಯನ್ನು ತಂದಿದ್ದೇವೆ.

ಡಾ॥ ವಿ. ಎಸ್. ಆಚಾರ್ಯ.—ಇಂಥದ್ದೇ ಅನಾಮಲಿಗಳು ಬೇರೆ ಬೇರೆ ನಮ್ಮ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಬಂದಿತ್ತು. ನಾನು ಉದ್ದೇಶ ಪೂರ್ವಕವಾಗಿ ಹೇಳುತ್ತಿಲ್ಲ. ಅಲ್ಲಿ ಮೂಲ ಗೇಣಿದಾರನಿಗೆ ಸ್ವಯಂ ಸ್ಥಳವನ್ನು ವಿಂಗಡಣೆ ಮಾಡಿ ಮಾರಾಟಮಾಡಲು ಮತ್ತು ದಾನಕೊಡಲು ಹಕ್ಕು ಮುಂಚಿನಿಂದಲೂ ಇತ್ತು. 1974ರಲ್ಲಿ ಭೂಸುಧಾರಣೆ ಕಾನೂನು ಬಂದಮೇಲೆ ರೈತನಿಗೆ ಮುಂಚೆ ಇದ್ದಂಥ ಹಕ್ಕು ಮಾರಾಟ ಮಾಡುವಂಥ ಹಕ್ಕು ವಿಂಗಡಣೆ ಮಾಡತಕ್ಕಂಥ ಹಕ್ಕನ್ನು ಮೊಟಕು ಗೊಳಿಸಿತು. ಮೊದಲಿದ್ದ ಹಕ್ಕನ್ನು ರೈತನು ಪಡೆಯುವುದಕ್ಕೆ ಪುನಃ ತಿದ್ದುಪಡಿ ಮಾಡುವಾಗ ಗಮನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಡಿ.ಸಿ.ಯವರಿಗೆ ಕೊಡುವಂಥ ಪರ್ಮಿಷನ್ ಕೊಟ್ಟಿದ್ದೇವೆ.

ಡಾ॥ ವಿ. ಎಸ್. ಆಚಾರ್ಯ.—ಮಾರಾಟ ಮಾಡತಕ್ಕಂಥ ಅಧಿಕಾರ ತಾತ್ಕಾಲಿಕವಾಗಿ 15 ವರ್ಷಗಳಿಂದ ಮುಂಚೆ ಇದ್ದುದು ಹೋಯಿತು. ಈ ದೃಷ್ಟಿಯಿಂದ ಮನವಿ ಕೊಟ್ಟಿದ್ದಾರೆ. ಸನ್ಮಾನ್ಯ ಸಚಿವರು ಈ ಬಗ್ಗೆ ತಿದ್ದುಪಡಿಯನ್ನು ತಂದು ಮೂಲಗೇಣಿದಾರರಿಗೆ ಸಂಪೂರ್ಣವಾದ ಒಡೆತನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಈಗಿರತಕ್ಕಂಥ ಕಾನೂನು ಅದೇ ರೀತಿಯಲ್ಲಿರುತ್ತದೆ.

Mr. Deputy Speaker.—I will now put the consideration motion to the vote of the House. The question is :

"That the Karnataka Village Offices Abolition (Amendment) Bill, 1984, be taken into consideration."

The Motion was adopted

Clause by Clause consideration

Mr. Deputy Speaker.—The question is :

"That Clauses 2 and 3 do stand part of the Bill."

The Motion was adopted

Clauses 2 and 3 were added to the Bill

Clause 1, Title etc.

Mr. Deputy Speaker.—The question is :

"That Clause 1, the Long Title, the Preamble and the enacting formula do stand part of the Bill."

The motion was adopted

Clause 1. the Long Title, the Preamble and the Enacting formula were added to the Bill

Motion to Pass

Sri V. L. Patil (Minister for Revenue).—Sir, I beg to move :

"That the Karnataka Village Offices Abolition (Amendment) Bill, 1984, be passed."

Mr. Deputy Speaker.—The question is :

"That the Karnataka Village Offices Abolition (Amendment) Bill, 1984, be passed."

The motion was adopted and the Bill was passed

(iv) ಕರ್ನಾಟಕ ಲೋಕಾಯುಕ್ತ ವಿಧೇಯಕ 1984

(ಪರ್ಯಾಲೋಚನಾ ಪ್ರಸ್ತಾಪ)

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, 1984 ನೇ ಇಸವಿ ಕರ್ನಾಟಕ ಲೋಕಾಯುಕ್ತ ವಿಧೇಯಕಕ್ಕೆ ವಿಧಾನ ಪರಿಷತ್ತು ಸೂಚಿಸಿದ ಕೆಲವು ತಿದ್ದುಪಡಿಗಳನ್ನು ಸಭೆಯು ಪರ್ಯಾಲೋಚಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಪ್ರಸ್ತಾವನ್ನು ಸೂಚಿಸಲಾಯಿತು

ಇದರಲ್ಲಿ ಕೆಲವು ವಿಧಾನಪರಿಷತ್ತಿನಲ್ಲಿ ತಿದ್ದುಪಡಿಗಳಾಗಿವೆ. ಮೂಲತಃ ಮಾನೇ ಕ್ಲಾಸ್‌ನಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನು ಕನ್‌ಸಲ್ಟ್ ಮಾಡಬೇಕೆಂದು ಇರಲಿಲ್ಲ. ವಿಧಾನಸಭೆಯಲ್ಲಿ ಪಾಸ್ ಮಾಡಿದಾಗ ಇಲ್ಲಿಯ ಸೂಚನೆ ಏನಿತ್ತು ಅಂದರೆ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನು ಕನ್‌ಸಲ್ಟ್ ಮಾಡಿ ಲೋಕಾಯುಕ್ತ ನೇಮಕ ಮಾಡಬೇಕು ಎನ್ನತಕ್ಕಂಥ ಒಂದು ತಿದ್ದುಪಡಿ ಇದೆ ಆಮೇಲೆ ಇನ್ನೊಂದು 5ನೇ ಕ್ಲಾಸ್‌ನ (2) ನೇ ಉಪಖಂಡದಲ್ಲಿ (ಡಿ) ಎಂಬ ಕಂಸಗಳು ಮತ್ತು ಅಕ್ಷರಕ್ಕೆ "(ಜಿ)" ಎಂಬ ಖಂಡಗಳು ಮತ್ತು ಅಕ್ಷರವನ್ನು ಪ್ರತಿಸ್ಥಾಪಿಸತಕ್ಕದ್ದು. ಮತ್ತೆ 12 ನೆಯ ಖಂಡದಲ್ಲಿ "ಜಿ" ಸೇರಿಸಬೇಕೆಂದು ಹೇಳಿ ಸೇರಿಸಿದೆ. ಹಿಂದೆ ಅದು ತಪ್ಪು ಬಿದ್ದಿದೆ, ಅದನ್ನು ಸೇರಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.— ಉಪಬಂಧದಲ್ಲಿ ಪರಂತುಕ ಎಂದು ಇರುತ್ತದೆ. ಪರಂತುಕ ಎಂದರೆ ಏನು ?

ಶ್ರೀ ಎ. ಲಕ್ಷ್ಮೀಸಾಗರ್.— ಅದಕ್ಕೋಸ್ಕರವೇ ಕ್ಲಾಸ್ ಎಂದು ಓದುತ್ತಿದ್ದೇನೆ 5ನೇ ಕ್ಲಾಸ್‌ನಲ್ಲಿ "ಸರ್ಕಾರದಲ್ಲಿ ಸಲ್ಲಿಸಿದ ಸೇವೆಯ ಎಂಬ ಪದಗಳಿಗೆ" ಸರ್ಕಾರದಲ್ಲಿ ಅಥವಾ ನ್ಯಾಯಾಧೀಶನಾಗಿ ಸಲ್ಲಿಸಿದ ಪೂರ್ವ ಸೇವೆಯ ಎಂಬುದನ್ನು ಹೊಸದಾಗಿ ಸೇರಿಸಿದ್ದಾರೆ ಇನ್ನು 5ನೇ ಕ್ಲಾಸ್‌ನಲ್ಲಿ 4 (ಎ) ಉಪಖಂಡದಲ್ಲಿ ಭಾರತದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶ ಎಂಬುದರ ಬದಲಾಗಿ ಭಾರತದ ಮುಖ್ಯ ನ್ಯಾಯಾಧೀಶರು ಎಂದು ಇರಬೇಕು.

ಇನ್ನು ಖಂಡ 13ರಲ್ಲಿ ಏನಾಗಿದೆ ಎಂದರೆ 2ನೇ ಸಬ್ ಕ್ಲಾಸ್ ಇದರಲ್ಲಿ ಮೊದಲನೆಯದು ಮುಖ್ಯ ಮಂತ್ರಿ ಅಥವಾ ಮಂತ್ರಿಯಾಗಿದ್ದರೆ ಸಂದರ್ಭಾನುಸಾರ ತನ್ನ ಮುಖ್ಯಮಂತ್ರಿಯ ಅಥವಾ ಮಂತ್ರಿಯ ಪದಕ್ಕೆ ರಾಜೀನಾಮೆ ಕೊಡತಕ್ಕದ್ದು... ಶಾಸಕರು ಕೊಡಬೇಕಾಗಿಲ್ಲ ಆದುದರಿಂದ ಶಾಸಕರು ಎನ್ನುವ ಪದವನ್ನು ತೆಗೆದಿದ್ದೇವೆ. ಶಾಸಕರಿಗೆ ರಿಯಾಯಿತಿಯನ್ನು ಕೊಟ್ಟಿರುತ್ತೇವೆ. ಅವರು ರಾಜೀನಾಮೆಯನ್ನು ಕೊಡಬೇಕಾಗಿಲ್ಲ, ಇನ್ನೊಂದು (2) ಉಪಖಂಡದ (11) ನೇ ಬಾಬಿನಲ್ಲಿ "ಸರ್ಕಾರೇತರ ನೌಕರನಾಗಿದ್ದರೆ ಎಂಬ ಪದಗಳಿಗೆ ಮೊದಲು" ವಿಧಾನಮಂಡಲದ ಸದಸ್ಯನ ಹೊರತು ಎಂಬ ಪದಗಳನ್ನು ಸೇರಿಸತಕ್ಕದ್ದು.

ಖಂಡಗಳು 19 ಮತ್ತು 25ರ "ಜಿ" ಎನ್ನುವುದನ್ನು ಸೇರಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.— ಪರಂತುಕ ಎಂದರೆ ಏನು ? ಈ ಶಬ್ದವನ್ನು ಮಾನ್ಯ ನಾರಾಯಣಕುಮಾರ್‌ರವರು ಉಪಯೋಗಿಸಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ.